**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ **21/2022** ಸಿ.ಡಬ್ಲ್ಯೂ–**9** ಪಿ.ಡಬ್ಲ್ಯೂ-**7**

| | | |
|---|---|---|
| ಹೆಸರು | ಃ | ವೆಂಕಟೇಶ |
| ತಂದೆ:ಗಂಡ | ಃ | ಬಿಂದುರಾವ್ ದೇಶಪಾಂಡೆ |
| ವಯಸ್ಸು | ಃ | ೫೨ ವರ್ಷ |
| ಉದ್ಯೋಗ | : | ಅಧೀಕ್ಷಕರು ಕಿವಡ ಮತ್ತು ಮುಕ, ಅಂದರ ಶಾಲೆ |
| ವಾಸಸ್ಥಳ | ಃ | ಕೊಪ್ಪಳ |

ದಿನಾಂಕಃ **22.08.2025**

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು 2012 ರಿಂದ 2022 ರವರೆಗೆ ಕಲಬುರಗಿಯಲ್ಲಿ ಕಿವುಡ ಮತ್ತು ಮೂಖ ಅಂದರ ಶಾಲೆ ಅಧೀಕ್ಷಕರು ನಂತರ ಜಿಲ್ಲಾ ಅಂಗವೀಕಲ ಕಲ್ಯಾಣ ಅಧಿಕಾರಿ ಅಂತ ಕಾರ್ಯ ನಿರ್ವಹಿಸಿದ್ದೇನೆ.

ದಿ. 14-09-2021 ರಂದು ನರೋಣಾ ಪೋಲಿಸ್ ಠಾಣೆಯಿಂದ ನನಗೆ ಒಂದು ಮನವಿ ಪತ್ರ ಬಂದಿತ್ತು. ಅದರ ಪ್ರಕಾರ ನನಗೆ ಒಬ್ಬ ಮುಖ ವ್ಯಕ್ತಿಯ ಸನ್ನೆಗಳನ್ನು ಅರ್ಥ ಮಾಡಿಕೊಂಡು ನಮಗೆ ವರದಿಯನ್ನು ಸಲ್ಲಿಸಬೇಕು ಅಂತಾ ಕೇಳಿಕೊಂಡಿದ್ದರು. ನಾನು ಒಪ್ಪಿಕೊಂಡ ಮೇರೆಗೆ ಪೋಲಿಸರು ಸದರಿ ವ್ಯಕ್ತಿಯಾದ ಚಂದ್ರಶೇಖರ ಚಾಸಾ 4 ರವರನ್ನು ನಮ್ಮ ಶಾಲೆಗೆ ಕಳುಹಿಸಿದ್ದು, ನಾನು ಅವರನ್ನು ವಿಚಾರಿಸಿದಾಗ ಸದರಿ ವ್ಯಕ್ತಿಯು ಅವರು ಅವರ ಊರಿನ ಸಮುದಾಯ ಭವನದ ಕಟ್ಟೆಯ ಮೇಲೆ ಕುಳಿತುಕೊಂಡಾಗ ಒಬ್ಬ ವ್ಯಕ್ತಿಯು ಬಂದು ನನ್ನ ಊರುಗೋಲು ಕಸಿದುಕೊಂಡು ಹೋಡೆದಿರುತ್ತಾರೆ ಅಂತಾ ಮೊಬೈಲನಲ್ಲಿ ಇದ್ದ ಒಬ್ಬ ವ್ಯಕ್ತಿಯ ಭಾವ ಚಿತ್ರವನ್ನು ತೋರಿಸಿರುತ್ತಾರೆ. ಸಾಕ್ಷಿಗೆ ಈಗ ಒಂದು ಭಾವ ಚಿತ್ರವನ್ನು ತೋರಿಸಿದು ಸಾಕ್ಷಿಯು ಸದರಿ ಭಾವಚಿತ್ರದಲ್ಲಿ ಇರುವ ವ್ಯಕ್ತಿಯ ಭಾವಚಿತ್ರವನ್ನು ತೋರಿಸಿರುತ್ತಾರೆ ಅಂತಾ ಒಪ್ಪಿಕೊಂಡ ಮೇರೆಗೆ ಸದರಿ ಭಾವಚಿತ್ರವನ್ನು ನಿಪಿ. 3 ಅಂತಾ ಗುರುತಿಸಲಾಯಿತು. ಸದರಿ ವ್ಯಕ್ತಿಯು ನನಗೆ ಅವರು ಮೊದಲು ನರೋಣಾ ಆಸ್ಪತೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಕಲಬುರಗಿಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಅಂತಾ

ತಿಳಿಸಿರುತ್ತಾರೆ ಮತ್ತು ದಿಃ 30-06-2021 ರಂದು ಆಸ್ಪತ್ರೆಗೆ ದಾಖಲು ಆಗಿ ದಿಃ 05-07-2021 ಕ್ಕೆ ಆಸ್ಪತ್ರೆಯಿಂದ ಬಿಡುಗಡೆ ಆಗಿರುತ್ತೇನೆ ಅಂತಾ ತಿಳಿಸಿರುತ್ತಾರೆ ಮತ್ತು ಅವರ ಮಗ ದೂರನ್ನು ದಾಖಲಿಸಿರುತ್ತಾರೆ ಅಂತಲೂ ಸಹ ಹೇಳಿರುತ್ತಾರೆ. ನಾನು ಸದರಿ ವ್ಯಕ್ತಿಯು ಹೇಳಿದ ವಿಷಯವನ್ನು ಟೈಪ್ ಮಾಡಿಸಿ ಪೋಲಿಸರಿಗೆ ವರದಿ ಸಲ್ಲಿಸಿರುತ್ತೇನೆ.

ದಿಃ 14-09-2021 ರಂದು ನೀಡಿದ ವರದಿ ಮತ್ತು ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ. 4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 4 ಎ ಮತ್ತು ನಿಪಿ. 5 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಮು ವಿ ಇ ವಕೀಲರಿಂದಃ**

ನಾನು ಮುಖರ ಭಾಷೆಯನ್ನು ಅರ್ಥ ಮಾಡಿಕೊಂಡು ಅದನ್ನು ಭಾಷಾಂತರಣ ಮಾಡುತ್ತೇನೆ ಅಂತಾ ಸಾಭೀತು ಪಡಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಕೇಳಿರುವುದಿಲ್ಲ ಅಂತಾ ನುಡಿಯುತ್ತಾರೆ. ನನಗೆ ಪೋಲಿಸ್ ಪೇದೆಯವರು ದಿಃ 14-09-2021 ರಂದು ಖುದ್ದಾಗಿ ಬಂದು ಮನವಿ ಪತ್ರವನ್ನು ನೀಡಿರುತ್ತಾರೆ. ಅವರು ಸುಮಾರು 11.30 ಗಂಟೆಗೆ ಬಂದಿದ್ದರು, ಅವರ ಹೆಸರನ್ನು ನನಗೆ ಹೇಳಲು ಬರುವುದಿಲ್ಲ. ನಾನು ಮನವಿ ಪತ್ರವನ್ನು ಸ್ವೀಕರಿಸಿ, ಸ್ವೀಕೃತಿ ಪತ್ರವನ್ನು ನೀಡಿರುತ್ತೇನೆ. ಸದರಿ ಸ್ವೀಕೃತಿ ಪ್ರತಿಯನ್ನು ಪೋಲಿಸರು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ನಾನು ಚಾಸಾ 4 ರವರನ್ನು ಕರೆದುಕೊಂಡು ಬರಬೇಕು ಅಂತಾ ಬಾಯಿ ಮಾತಿನಿಂದ ಹೇಳಿದ್ದು ಲಿಖಿತವಾಗಿ ನೀಡಿರುವುದಿಲ್ಲ. ಚಾಸಾ 4 ರವರನ್ನು ದಿಃ 14-09-2021 ರಂದು 3.45 ರಿಂದ 4.00 ಗಂಟೆಯ ಒಳಗೆ ಒಬ್ಬ ಎ.ಎಸ್.ಐ ಮತ್ತು ಒಬ್ಬ ಪೇದೆಯವರು ನನ್ನ ಬಳಿ ಕರೆದುಕೊಂಡು ಬಂದಿದ್ದರು. ನಾನು ಚಾಸಾ 4 ರವರ ಹೇಳಿಕೆ ಪಡೆಯುವಾಗ ಎ.ಎಸ್.ಐ ಅವರು ನನ್ನ ಪಕ್ಕದಲ್ಲಿ ಇದ್ದರು. ನಾನು ಚಾಸಾ 4 ರವರ ಹೇಳಿಕೆಯನ್ನು ಪಡೆಯುವಾಗ ಫೋಟೊಗ್ರಾಫಿ ಮತ್ತು ವಿಡಿಯೋಗ್ರಾಫಿಯನ್ನು ಮಾಡಿರುವುದಿಲ್ಲ. ನಾನು 4.00 ರಿಂದ 4.30 ರವರೆಗೆ ಚಾಸಾ 4 ರವರ ಹೇಳಿಕೆ ಪಡೆದಿರುತ್ತೇನೆ. ನಿಪಿ. 4 ರಲ್ಲಿ ನಾನು ಚಾಸಾ 4 ರವರ ಹೇಳಿಕೆಯನ್ನು 4.00

ರಿಂದ 4.30 ರವರೆಗೆ ಎ.ಎಸ್.ಐ ರವರ ಸಮಕ್ಷಮದಲ್ಲಿ ಪಡೆದುಕೊಂಡಿರುತ್ತೇನೆ ಅಂತಾ ನಮೂದು ಮಾಡಿರುವುದಿಲ್ಲ. ನಿಪಿ. 5 ರಲ್ಲಿ ಕೇವಲ ಕಲಬುರಗಿ ಅಂತಾ ನಮೂದು ಇದ್ದು ಯಾವ ಸ್ಥಳ ಅಂತಾ ನಮೂದು ಇಲ್ಲ ಎಂದರೆ ಸರಿ. ಎ.ಎಸ್.ಐ ಅವರ ಸಹಿಯನ್ನು ಪಡೆದಿರುವುದಿಲ್ಲ ಎಂದರೆ ಸರಿ. ನಾನು ಚಾಸಾ 4 ರವರ ಸಹಿಯನ್ನು ನಿಪಿ. 5 ರ ಮೇಲೆ ಪಡೆದಿರುವುದಿಲ್ಲ. ಚಾಸಾ 4 ರವರು ಯಾವ ಕಂಪನಿಯ ಮೊಬೈಲನಿಂದ ಭಾವಚಿತ್ರವನ್ನು ತೋರಿಸಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ನಿಪಿ. 5 ರಲ್ಲಿ ಚಾಸಾ 4 ರವರು ಮೊಬೈಲನಿಂದ ಭಾವಚಿತ್ರವನ್ನು ತೋರಿಸಿರುತ್ತಾರೆ ಅಂತಾ ನಮೂದು ಮಾಡಿರುವುದಿಲ್ಲ. ನ್ಯಾಯಾಲಯದಲ್ಲಿ ಈಗ ಭಾವಚಿತ್ರ ತೋರಿಸಲು ಮೊಬೈಲ ಇಲ್ಲ ಎಂದರೆ ಸರಿ. ಈಗ ನ್ಯಾಯಾಲಯದಲ್ಲಿ ಮೊಬೈಲ ಇದ್ದರೆ ನಾನು ಅದರಲ್ಲಿ ಇರುವ ಚಿತ್ರವನ್ನು ನೋಡಿ ನ್ಯಾಯಾಲಯದಲ್ಲಿ ಇರುವ ಭಾವಚಿತ್ರಕ್ಕೆ ಹೋಲಿಕೆ ಮಾಡಬಹುದಿತ್ತು ಎಂದರೆ ಸರಿ. ಚಾಸಾ 4 ರವರು ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ನಿಪಿ. 5 ನ್ನು ನಮ್ಮ ಸಿಬ್ಬಂದಿಯಾದ ಮಹ್ಮದರವರು ಟೈಪ್ ಮಾಡಿರುತ್ತಾರೆ. ನಾನು ನಿಪಿ. 5 ರಲ್ಲಿ ಚಾಸಾ 4 ರವರ ಹೇಳಿಕೆ ಪಡೆದುಕೊಂಡು ಅದನ್ನು ಭಾಷಾಂತರಣ ಮಾಡಿ ಮಹ್ಮದ ಅವರಿಗೆ ಹೇಳಿದ ಮೇಲೆ ಅವರು ಟೈಪ್ ಮಾಡಿರುತ್ತಾರೆ ಅಂತಾ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ನನ್ನ ವರದಿಯೊಂದಿಗೆ ಪೋಲಿಸರು ನೀಡಿದ ಮನವಿ ಪತ್ರವನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನಗೆ ಪೋಲಿಸರು ಯಾವುದೇ ಮನವಿ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರವರು ನನ್ನ ಎದುರು ಯಾವುದೇ ಹೇಳಿಕೆ ನೀಡದೇ ಇದ್ದರೂ ಸಹಿತ ಪೋಲಿಸರ ಮಾತುಕೇಳಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ರವರು ಮುಖ ಇರುತ್ತಾರೆ ಅಂತಾ ಸಾಭೀತುಪಡಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

<u>ಮರುವಿಚಾರಣೆ : ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.